ಸಾಕ್ಷಿಯ ಹೆಸರುಃ ಕುಮಾರ

ದಿನಾಂಕಃ **26-09-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **1** ಮತ್ತು **2** ನೇ ಪ್ರತಿವಾದಿ ಪರ ಶ್ರೀ ವಿ.ಬಿ ವಕೀಲರಿಂದಃ

ನಾನು ಬಿ.ಎಸ್ಸಿ., ಓದಿರುತ್ತೇನೆ. ನನಗೆ ಕನ್ನಡ ಭಾಷೆ ಬರುತ್ತದೆ ಮತ್ತು ಇಂಗ್ಲೀಷ್ ಭಾಷೆ ಅಲ್ಪಸ್ವಲ್ಪ ಬರುತ್ತದೆ. ನಾನು ಸಹಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆ ಎರಡರಲ್ಲೂ ಮಾಡುತ್ತೇನೆ. ನನಗೆ ಕಾಳೇಗೌಡರ ಕುಟುಂಬದವರು ಚೆನ್ನಾಗಿ ಗೊತ್ತು. ಕಾಳೇಗೌಡರಿಗೆ ಮೂವರು ಮಕ್ಕಳು, ಅವರು ದೇವರಾಜೇಗೌಡ, ರಾಜೇಗೌಡ ಮತ್ತು ಮಲ್ಲೇಶ. ಆ ಮೂವರ ಪೈಕಿ ನನಗೆ ರಾಜೇಗೌಡರು ತುಂಬಾ ಹತ್ತಿರ ಎಂದರೆ ಸಾಕ್ಷಿ ಅವರು ಮೂರು ಜನ ಅತ್ತೆಯ ಮಕ್ಕಳು ಹಾಗೂ ಎಲ್ಲರೂ ಹತ್ತಿರ ಎನ್ನುತ್ತಾರೆ.

2) ನನಗೆ ಈ ದಾವೆಯ ಬಗ್ಗೆ ವಾದಿ ತಿಳಿಸಿರುತ್ತಾರೆ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ವಾದಿಯೇ ನನ್ನನ್ನು ಕರೆದಿರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ಸಂಗತಿಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ ಅದರಲ್ಲಿ ಬರೆದಿರುವ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ಅದಕ್ಕೆ ನಾನೇ ಸಹಿ ಮಾಡಿರುತ್ತೇನೆ. ನಾನು 1971 ರಲ್ಲಿ ಹುಟ್ಟಿರುತ್ತೇನೆ. 48-49 ವರ್ಷಗಳ ಹಿಂದೆ ದೇವರಾಜೇಗೌಡರ ಮದುವೆ ಲಲಿತಮ್ಮರವರ ಜೊತೆಗೆ ನಡೆದಿರಬಹುದು. ಈ ವಿಷಯವನ್ನು ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರು ಆ ವಿಷಯವನ್ನು ಕೇಳಿಲ್ಲ ಅದಕ್ಕೆ ನಾನು ಆ ವಿಷಯವನ್ನು ಹೇಳಿರುವುದಿಲ್ಲ ಎನ್ನುತ್ತಾರೆ. ಲಲಿತಮ್ಮರವರು ಯಾವಾ ಯಾವ ರೋಗದಿಂದ ಬಳಲುತ್ತಿದ್ದರು ಎಂದರೆ ಸಾಕ್ಷಿ ಅವರಿಗೆ ಯಾವುದೇ ರೋಗ ಇರಲಿಲ್ಲ ಎನ್ನುತ್ತಾರೆ. ನಾನು ಲಲಿತಮ್ಮರವರನ್ನು ಹಲವಾರು ಬಾರಿ ನೋಡಿರುತ್ತೇನೆ. ಲಲಿತಮ್ಮರವರು 1993 ರಲ್ಲಿ ತೀರಿಕೊಂಡಿರುತ್ತಾರೆ. ಈ ವಿಷಯವನ್ನು ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರು ಆ ವಿಷಯವನ್ನು ಕೇಳಿಲ್ಲ ಅದಕ್ಕೆ ನಾನು ಆ ವಿಷಯವನ್ನು ಹೇಳಿರುವುದಿಲ್ಲ ಎನ್ನುತ್ತಾರೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3) ದೇವರಾಜೇಗೌಡ ಮತ್ತು ಲಲಿತಮ್ಮರವರಿಗೆ ವಾದಿ ಯಾವಾಗ ಹುಟ್ಟಿರುತ್ತಾರೆ ಎಂದು ತಿಳಿದುಕೊಂಡಿರುವುದಿಲ್ಲ. ಲಲಿತಮ್ಮರವರು ನಮ್ಮ ಮನೆಗೆ ಹಲವಾರು ಬಾರಿ ಬಂದು ಹೋದಾಗ ವಾದಿ ಯಾವಾಗ ಹುಟ್ಟಿರುತ್ತಾರೆ ಎಂದು ನಮಗೆ ಹೇಳಿರಲಿಲ್ಲ ಕಾರಣ ನಾವು ಚಿಕ್ಕವರಿದ್ದೆವು. ವಾದಿ ಯಾವ ಆಸ್ಪತ್ರೆಯಲ್ಲಿ ಹುಟ್ಟಿರುತ್ತಾರೆ ಎಂದು ತಿಳಿದುಕೊಂಡಿರಲಿಲ್ಲ ಕಾರಣ ನಾವು ಚಿಕ್ಕವನಾಗಿದ್ದೆನು. ಸಾಕ್ಷಿ ಹೇಳಲು ಬರುವಾಗ ಕೂಡ ನಾನು ವಾದಿಯಿಂದ, ಅವರು ಯಾವ ಆಸ್ಪತ್ರೆಯಲ್ಲಿ ಹುಟ್ಟಿರುತ್ತಾರೆ ಎಂದು ತಿಳಿದುಕೊಂಡಿರಲಿಲ್ಲ. ಸುಮಾರು 7-8 ವರ್ಷಗಳ ಹಿಂದೆ ನಮ್ಮ ಗ್ರಾಮದ ಸುಬ್ಬೇಗೌಡರು, ನಾಗರಾಜೇಗೌಡರು, ಕೃಷ್ಣೇಗೌಡರು ಹಾಗೂ ನಾನು ಸೇರಿ ವಾದಿ ಭಾಗ ಕೊಡುವ ಬಗ್ಗೆ ಪಂಚಾಯಿತಿ ಮಾಡಿದ್ದೆವು. ಈ ವಿಷಯವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರಲಿಲ್ಲ ಹಾಗೂ ಹೇಳಲು ತೊಂದರೆ ಇರಲಿಲ್ಲ ನಾನು ಈ ವಿಷಯವನ್ನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಪ್ರತಿವಾದಿಗಳನ್ನು ನಾವು ಫೋನ್ ಮಾಡಿ ಊರಿಗೆ ಕರೆಯಿಸಿದ್ದೆವು. ಸುಮಾರು 9-10 ವರ್ಷಗಳ ಹಿಂದೆ ದೇವರಾಜೇಗೌಡರು ತೀರಿಕೊಂಡಿರುತ್ತಾರೆ. 8-9 ವರ್ಷಗಳ ಹಿಂದೆ ಪಂಚಾಯಿತಿ ಮಾಡಿದಾಗ, ದೇವರಾಜೇಗೌಡರು ತೀರಿಕೊಂಡಿದ್ದರು. ದೇವರಾಜೇಗೌಡರು ತೀರಿಕೊಂಡ ನಂತರ ರಾಜೀ ಪಂಚಾಯಿತಿ ಮಾಡಿದ್ದೆವು ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರಲಿಲ್ಲ ಕಾರಣ ನಮ್ಮ ವಕೀಲರು ಕೇಳಿರಲಿಲ್ಲ. ವಕೀಲರು ವಾದಿ ದೇವರಾಜೇಗೌಡರ ಮಗ ಹೌದೋ ಅಲ್ಲವೋ ಎಂದು ಮಾತ್ರ ಕೇಳಿದ್ದರು ಅದಕ್ಕೆ ನಾನು ಉತ್ತರಿಸಿರುತ್ತೇನೆ

4) ನನ್ನ ತಾಯಿಯ ಹೆಸರು ಜಯಮ್ಮ, ನನ್ನ ತಂದೆ ಬೋರಲಿಂಗೇಗೌಡರ ತಂದೆಯ ಹೆಸರು ಸುಬ್ಬೇಗೌಡ. ಕಾಳೇಗೌಡರ ಹೆಂಡತಿಯ ಹೆಸರು ಚೆನ್ನಮ್ಮ. ಸುಬ್ಬೇಗೌಡರು ಮತ್ತು ಚೆನ್ನಮ್ಮ ಅಣ್ಣ ತಂಗಿಯರು. ನಾನು ಸುಬ್ಬೇಗೌಡರ ಮೊಮ್ಮಗ ಎಂದರೆ ಸರಿ. ನನ್ನ ತಂದೆ ಬೋರಲಿಂಗೇಗೌಡ ಚೆನ್ನಮ್ಮರವರ ಸೋದರ ಅಳಿಯ ಎಂದರೆ ಸರಿ. ನಾನು ಲಲಿತಮ್ಮ ರವರಿಗೆ ರಕ್ತ ಸಂಬಂಧಿ ಅಲ್ಲ. ನಾನು ಸಂಬಂಧದಲ್ಲಿ ಚೆನ್ನಮ್ಮರವರಿಗೆ ಮಗ ಎಂದರೆ ಸರಿ. ನನಗೆ ಲಲಿತಮ್ಮರವರ ಸಂಬಂಧ ಚೆನ್ನಮ್ಮ ರವರ ಕಡೆಯಿಂದ ತುಂಬಾ ದೂರದ ಸಂಬಂಧ ಎಂದರೆ ಸರಿ. ಕಾಳೇಗೌಡರು ಅವರ ಮಕ್ಕಳಿಗೆ

ವಿಲ್ ಬರೆದ ವಿಚಾರ ತಿಳಿದುಕೊಂಡಿರುತ್ತೇನೆ. ಅದರ ಒಕ್ಕಣಿಕೆಗಳನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ. ನಾನು ರಾಜೇಗೌಡರಿಗೆ ತುಂಬಾ ಹತ್ತಿರದ ಸಂಬಂಧ ಎಂದರೆ ನಾನು ಎಲ್ಲರಿಗೂ ಹತ್ತಿರವಾಗಿದ್ದೇನೆ ಎನ್ನುತ್ತಾರೆ.

5) ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ, ಅದರಲ್ಲಿರುವ ಕುಮಾರ್ ಹೆಚ್ ಬಿ ಎಂಬ ಸಹಿಯನ್ನು ತೋರಿಸಿ ಇದು ನಿಮ್ಮ ಸಹಿ ಎಂದು ಕೇಳಿದಾಗ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಯು ಎಂ.ಆರ್ ಎಕ್ಸ್.ಟ್ರ್ಯಾಕ್ಟ್ ನ ದೃಢೀಕೃತ ಪ್ರತಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಎಂ.ಆರ್ ಎಕ್ಸ್.ಟ್ರ್ಯಾಕ್ಟ್ ನ ದೃಢೀಕೃತ ಪ್ರತಿಯನ್ನು ನಿಡಿ**-06** ಮತ್ತು ಸಾಕ್ಷಿಯ ಸಹಿಯನ್ನು ನಿಡಿ**-06(ಎ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಇನ್ನೊಂದು ದಾಖಲೆಯನ್ನು ತೋರಿಸಿ, ಅದರಲ್ಲಿರುವ ಕುಮಾರ್ ಎಂಬ ಆಂಗ್ಲ ಭಾಷೆಯ ಸಹಿಯನ್ನು ತೋರಿಸಿ ಇದು ನಿಮ್ಮ ಸಹಿ ಎಂದು ಕೇಳಿದಾಗ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಯು ದಿನಾಂಕಃ10.11.2017 ರಂದು ಮಾಡಿರುವ ಮಹಜರಿನ ದೃಢೀಕೃತ ಪ್ರತಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಮಹಜರಿನ ದೃಢೀಕೃತ ಪ್ರತಿಯನ್ನು ನಿಡಿ**-07** ಮತ್ತು ಸಾಕ್ಷಿಯ ಸಹಿಯನ್ನು ನಿಡಿ**-07(ಎ)** ಎಂದು ಗುರುತಿಸಲಾಯಿತು. ನಿಡಿ-07 ರಲ್ಲಿ ಕಾಳೇಗೌಡರ ಒಬ್ಬನೇ ಮಗನಾದ ರಾಜೇಗೌಡ ಎಂದು ಬರವಣಿಗೆಯಾದ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಈಗ ಇನ್ನೊಂದು ದಾಖಲೆಯನ್ನು ತೋರಿಸಿ, ಅದು ಕಾಳೇಗೌಡರ ವಂಶವೃಕ್ಷದ ದೃಢೀಕರಣ ಪತ್ರವಾಗಿದ್ದು, ಅದರಲ್ಲಿ ಕಾಳೇಗೌಡ ಮತ್ತು ಚೆನ್ನಮ್ಮ ರವರಿಗೆ ರಾಜೇಗೌಡ ಮಗನೆಂದು ನಮೂದಿಸಿರುತ್ತಾರೆ ಎಂದು ಕೇಳಿದಾಗ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಯು ಆನ್‌ಲೈನ್ ಪ್ರತಿ ಎಂದು ಪ್ರತಿವಾದ ಪರ ವಕೀಲರು ತಿಳಿಸಿರುತ್ತಾರೆ. ಸದರಿ ದಾಖಲೆಯು ರುಜುವಾತಿಗೆ ಒಳಪಟ್ಟು ಅದನ್ನು ನಿಡಿ**-08** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ವಂಶವೃಕ್ಷದ ಪ್ರಮಾಣ ಪತ್ರವನ್ನು ತೋರಿಸಿ ಕಾಳೇಗೌಡರಿಗೆ ಒಬ್ಬನೇ ಮಗನೆಂದು ಅವರು ರಾಜೇಗೌಡರು ಎಂದು ಕೇಳಿದಾಗ, ಸಾಕ್ಷಿ ಈ ಪ್ರಮಾಣ ಪತ್ರ ತಯಾರಿಸಿದಾಗ ನಾನು ಇರಲಿಲ್ಲ ಮತ್ತು ಮಹಜರ್ ಬರೆದ ನಂತರ ನನ್ನ ಸಹಿ ಪಡೆದಿರುತ್ತಾರೆ ಎನ್ನುತ್ತಾರೆ. ದೇವರಾಜೇಗೌಡ ಮತ್ತು ಪುಟ್ಟಮ್ಮ ರವರಿಗೆ ವಾದಿ ಹುಟ್ಟಿದ

ಮಗನೇ ಅಲ್ಲದೇ ಇದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳಿದರೆ ಶಿಕ್ಷೆಯಾಗುತ್ತದೆ ಎಂದು ತಿಳಿದುಕೊಂಡಿರುತ್ತೇನೆ.

6) ಸರ್ವೆ ನಂ.13/1 ಮತ್ತು 39/1 ಸಿ ರಲ್ಲಿನ ಆಸ್ತಿಗಳಿಗೆ ರಾಜೇಗೌಡ ಅನಧಿಕೃತವಾಗಿ ಖಾತೆ ಬದಲಾವಣೆ ಮಾಡಿಕೊಂಡಿರುವುದನ್ನು ಮಲ್ಲೇಶ ಮತ್ತು ದೇವರಾಜೇಗೌಡರವರ ಕುಟುಂಬದವರು ಪ್ರಶ್ನಿಸಿ ಅರ್ಜಿ ಸಲ್ಲಿಸಿ, ಆ ಖಾತೆಗಳನ್ನು ರದ್ದು ಮಾಡಿಸಿರುವ ವಿಷಯ ನನಗೆ ಗೊತ್ತಿಲ್ಲ. ಸರ್ವೆ ನಂ.13/1 ಮತ್ತು 39/1 ಸಿರಲ್ಲಿರುವ ಸ್ವತ್ತುಗಳು ಇಲ್ಲ ಎಂದು ನಾನು ಎಲ್ಲೂ ಪ್ರಶ್ನಿಸಿಲ್ಲ. ಸರ್ವೆ ನಂ.183/1 ಮತ್ತು ಸರ್ವೆ ನಂ.189/1 ಸಿ ಸ್ವತ್ತು ರಿ-ಸರ್ವೆ ನಂಬರ್ ಆಗಿದೆ ಎಂದರೆ ಸಾಕ್ಷಿ ಅದು ಮೊದಲಿನಿಂದಲೂ ಸರ್ವೆ ನಂ.183/1 ಮತ್ತು ಸರ್ವೆ ನಂ.189/1 ಸಿ ಇದೆ ಎನ್ನುತ್ತಾರೆ.

7) ಸಾಕ್ಷಿಗೆ ಈಗ ನಿಡಿ-04 ಚುನಾವಣಾ ಮತದಾರರ ಪಟ್ಟಿಯನ್ನು ತೋರಿಸಿ, ಕ್ರಮ ಸಂಖ್ಯೆ 1125 ರಲ್ಲಿರುವ ವ್ಯಕ್ತಿ ರಾಜೇಗೌಡ ಬಿನ್ ಕಾಳೇಗೌಡ, 1126 ರಲ್ಲಿರುವ ವ್ಯಕ್ತಿ ಪುಟ್ಟಮ್ಮ ಕೋಂ ರಾಜೇಗೌಡ ಮತ್ತು 1128 ರಲ್ಲಿರುವ ವ್ಯಕ್ತಿ ಸತೀಶ್ ಬಿನ್ ರಾಜೇಗೌಡ ಎಂದು ನಮೂದಿಸಿದೆ ಎಂದು ಕೇಳಿದಾಗ, ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ಮೂರು ಕ್ರಮ ಸಂಖ್ಯೆಗಳನ್ನು ಕ್ರಮವಾಗಿ ನಿಡಿ**-4(ಬಿ),** ನಿಡಿ**-4(**ಸಿ**)** ಮತ್ತು ನಿಡಿ**-4(**ಡಿ**)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನಿಡಿ-04 ಚುನಾವಣಾ ಮತದಾರರ ಪಟ್ಟಿಯನ್ನು ತೋರಿಸಿ, ಕ್ರಮ ಸಂಖ್ಯೆ 111 ರಲ್ಲಿರುವ ವ್ಯಕ್ತಿ ಆನಂದ, 112 ರಲ್ಲಿರುವ ವ್ಯಕ್ತಿ ಗಿರೀಶ್ ಎಂದು ನಮೂದಿಸಿದೆ ಎಂದು ಕೇಳಿದಾಗ, ಸಾಕ್ಷಿ ಈ ಆನಂದ್ ಬೇರೆ ಆನಂದ್ ಆಗಿರುತ್ತಾರೆ ಹಾಗೂ ಆ ಫೋಟೋದಲ್ಲಿರುವ ವ್ಯಕ್ತಿ ವಾದಿ ಆನಂದ್ ಅಲ್ಲ ಎನ್ನುತ್ತಾರೆ ಹಾಗೂ ಗಿರೀಶ್ ಯಾರು ಎಂದು ಗೊತ್ತಿಲ್ಲ ಎನ್ನುತ್ತಾರೆ. ಲಲಿತಮ್ಮರವರ ತಂದೆಯ ಹೆಸರು ಬಸವೇಗೌಡ. ಅವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ನಿಡಿ-04(ಎ)ರಲ್ಲಿರುವ ವ್ಯಕ್ತಿ ಆನಂದ್ ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನಿಖರವಾಗಿ ಕಾಣುತ್ತಿಲ್ಲ ಎನ್ನುತ್ತಾರೆ. ನಾನು ಆನಂದ ಮತ್ತು ರಾಜೇಗೌಡ ಸೇರಿ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ವಾದಿಗೆ

ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ಈ ದಾವೆಯಲ್ಲಿ ಆನಂದ ದೇವರಾಜೇಗೌಡರವರ ಮಗ ಅಲ್ಲ ಎಂದು ರುಜುವಾತಾದರೆ ನನ್ನ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲು ನನ್ನದೇನು ಅಭ್ಯಂತರವಿಲ್ಲ

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.